## ತಃಖ್ತೆ ನಂ – 5

**ದಿನಾಂಕ :24-09-2022 ರಂದು ಸೇರಿದ ಸಾಮಾನ್ಯ ಸಭೆಯಲ್ಲಿ ಸ್ವೀಕರಿಸಿದ ಉಪನಿಯಮದ ತಿದ್ದುಪಡಿ ತಖ್ತೆಗಳು**

| ಕ್ರ. ಸಂ. | ತಿದ್ದುಪಡಿಯಾದ ಉಪನಿಯಮ ನಂ | ತಿದ್ದುಪಡಿ ಸ್ವೀಕರಿಸಿದ ನಂತರ ಆಗುವ ಸದರಿ ಉಪನಿಯಮದ ಪೂರ್ಣ ವಿವರ. |
|---|---|---|
| 1 | 1 | **ಸಹಕಾರಿಯ ಹೆಸರು :**<br>ಈ ಸಹಕಾರಿಯ ಹೆಸರು "ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ."ಎಂದು ಇರತಕ್ಕದ್ದು. |
| 2 | 4<br>6) | **ಶಬ್ದಾರ್ಥಗಳು– ಪರಿಭಾಷೆಗಳು**<br>ಈ ಉಪವಿಧಿಗಳಲ್ಲಿ ಬಳಸಿರುವ ಪದಗಳು ಮತ್ತು ಪದ ವಿನ್ಯಾಸಗಳು ಸಂದರ್ಭಕ್ಕನುಸಾರವಾಗಿ ಬೇರೆ ಅರ್ಥ ನೀಡದಿದ್ದಲ್ಲಿ ಇಲ್ಲಿನ ಶಬ್ದಾರ್ಥಗಳು ಕರ್ನಾಟಕ ಸೌಹಾರ್ದ ಕಾಯಿದೆ 1997 ಮತ್ತು ಸೌಹಾರ್ದ ಸಹಕಾರಿ ನಿಯಮಗಳಲ್ಲಿನ ಶಬ್ದಾರ್ಥಗಳನ್ನು ಅಥವಾ ಆಗಿಂದಾಗ್ಗೆ ಕಾಯಿದೆ ಮತ್ತು ನಿಯಮಗಳಲ್ಲಿ ತರಲಾಗುವ ಮಾರ್ಪಾಡುಗಳನ್ನು ಒಳಗೊಂಡಿರತಕ್ಕದ್ದು.<br>**'ಸಹಕಾರಿ'** ಎಂದರೆ ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ. |
| | 24) | ಉಪವಿಧಿಯಲ್ಲಿ ಎಲ್ಲೆಲ್ಲಿ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಎಂದು ಅರ್ಥ ಬರುವುದೋ ಅಲ್ಲೆಲ್ಲಾ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಎಂದು ಅರ್ಥೈಸಿಕೊಳ್ಳತಕ್ಕದ್ದು.<br>**'ಸಹಕಾರ ಚುನಾವಣಾ ಪ್ರಾಧಿಕಾರ'** ಎಂದರೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ (1959 ರ ಕರ್ನಾಟಕ ಅಧಿನಿಯಮ ಸಂಖ್ಯೆ11)ರ 39ಎಎ ಪ್ರಕರಣದಡಿಯಲ್ಲಿ ರಚಿತವಾದ ಸಹಕಾರ ಚುನಾವಣಾ ಪ್ರಾಧಿಕಾರ.<br>ಉಪವಿಧಿಯಲ್ಲಿ ಎಲ್ಲೆಲ್ಲಿ 'ಚುನಾವಣಾ ಆಯೋಗ' ಎಂಬ ಉಲ್ಲೇಖವಿರುವುದೋ ಅಲ್ಲೆಲ್ಲಾ 'ಚುನಾವಣಾ ಪ್ರಾಧಿಕಾರ' ಎಂದು ಅರ್ಥೈಸಿಕೊಳ್ಳತಕ್ಕದ್ದು. |
| 3 | 4(ಅ)<br>5) | **ಈ ಉಪನಿಯಮಗಳಲ್ಲಿ ಬಳಸಲಾಗಿರುವ ಇತರ ಪದಗಳ ಅರ್ಥಗಳು ಈ ರೀತಿ ಇರುತ್ತವೆ.**<br>**ಅರ್ಹ ಸದಸ್ಯ :** ಎಂದರೆ ಸುಸ್ತಿದಾರನಾಗಿಲ್ಲದ, ಸಹಕಾರಿಗೆ ಪಾವತಿ ಮಾಡಬೇಕಾದ ಯಾವುದೇ ಮೊತ್ತಗಳನ್ನು ಬಾಕಿ ಉಳಿಸಿಕೊಂಡಿಲ್ಲದ, ಸಹಕಾರಿಯ ಉಪವಿಧಿಗಳಲ್ಲಿ ಚುನಾವಣೆ/ ಮಹಾಸಭೆಯಲ್ಲಿ ಭಾಗವಹಿಸಲು ನಿಗದಿ ಪಡಿಸಿರುವ ಕನಿಷ್ಟ ಸಂಖ್ಯೆಯ ಷೇರುಗಳನ್ನು ಹೊಂದಿರುವ, ಸಹಕಾರಿ ನಿಗದಿಪಡಿಸಿರುವ ಕನಿಷ್ಟ ಮಟ್ಟದ ವ್ಯವಹಾರಗಳನ್ನು ಹಿಂದಿನ 5 ಸಹಕಾರಿ ವರ್ಷಗಳ ಪೈಕಿ ಕನಿಷ್ಟ ಎರಡು ಸಹಕಾರಿ ವರ್ಷಗಳಲ್ಲಿ ನಡೆಸಿರುವ, ಹಿಂದಿನ 5 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಟ ಎರಡು ಸಾಮಾನ್ಯ ಸಭೆಗಳಲ್ಲಿ ಹಾಜರಾಗಿರುವ ಹಾಗೂ ಯಾವುದೇ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಶಿಕ್ಷೆಗೆ ಗುರಿಯಾಗಿಲ್ಲದ ಸದಸ್ಯ. |
| 4 | 6<br>(2) | ನಿಧಿ ಸಂಗ್ರಹಣೆ :<br>ಮೇಲ್ಕಂಡ ಎಲ್ಲಾ ಅಥವಾ ಯಾವುದೇ ಉದ್ದೇಶಗಳ ಕಾರ್ಯಾಚರಣೆಗೆ ಸಹಕಾರಿಯು ತನ್ನ ಸದಸ್ಯರಿಂದ ಈ ಕೆಳಕಂಡ ವಿಧಾನಗಳಲ್ಲಿ ನಿಧಿ ಸಂಗ್ರಹಣೆ ಮಾಡಬಹುದು.<br>ಯಾವುದೇ ಇತರ ಹಣಕಾಸು ಸಂಸ್ಥೆಗಳು ಮತ್ತು ಸಂಘಗಳಿಂದ ಠೇವಣಿಗಳನ್ನು ಹೊರತು ಪಡಿಸಿ ತನ್ನ ಸದಸ್ಯರಿಂದ ವಿವಿಧ ರೀತಿಯ ಠೇವಣಿಗಳನ್ನು ಸ್ವೀಕರಿಸುವ ಮುಖಾಂತರ; |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,
ವಿನೋಬನಗರ ಶಿವಮೊಗ್ಗ-577 204.

ಅಧ್ಯಕ್ಷರು
ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ (ನಿ)
ವಿನೋಬನಗರ, ಶಿವಮೊಗ್ಗ-577 204

| | | |
|---|---|---|
| 5 | 8<br>(2) | **ಅಧಿಕೃತ ಷೇರು ಬಂಡವಾಳ / ಮುಖ ಬೆಲೆ ಮತ್ತು ಮಿತಿಗಳು :**<br>ಸದಸ್ಯನೊಬ್ಬನು ಹೊಂದಿರಬಹುದಾದ ಷೇರುಗಳ ಒಟ್ಟು ಮೊತ್ತವು ಸಹಕಾರಿಯ ಒಟ್ಟು ಷೇರು ಬಂಡವಾಳದ ಶೇ.5ರಷ್ಟನ್ನು ಮೀರಿ ನಿಯಮಿಸಬಹುದಾದಂಥ ಅದರ ಭಾಗಕ್ಕಿಂತ ಹೆಚ್ಚು ಅಥವಾ 250 ಷೇರುಗಳನ್ನು ಮೀರಿ ಇರತಕ್ಕದ್ದಲ್ಲ (ಎರಡರಲ್ಲಿ ಯಾವುದು ಕಡಿಮೆಯೋ ಅದು). ಕನಿಷ್ಟ ಒಂದು ಮತ್ತು ಗರಿಷ್ಟ 250 ಆಗಿರತಕ್ಕದ್ದು. |
| 6 | 18<br>1)<br><br>6)<br><br>10) | **ಸದಸ್ಯರು ಸಾಮಾನ್ಯ ಸಭೆ/ಚುನಾವಣೆಯಲ್ಲಿ ಭಾಗವಹಿಸಲು/ಮತ ಚಲಾಯಿಸಲು/ನೋಟೀಸ್ ಪಡೆಯಲು ಇರುವ ಅನರ್ಹತೆಗಳು :**<br>ಸಹಕಾರಿಯು ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದ ಕನಿಷ್ಠ ವ್ಯವಹಾರಗಳನ್ನು ಹಿಂದಿನ 5 ಸಹಕಾರಿ ವರ್ಷಗಳ ಪೈಕಿ ಎರಡು ಸಹಕಾರಿ ವರ್ಷಗಳವರೆಗೆ ಮಾಡದಿರುವವರು.<br>ಹಿಂದಿನ ಐದು ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಟ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗದೇ ಇರುವವರು.<br>ಕಾಯ್ದೆ ಕಲಂ 20 (ಬಿ)ರೀತ್ಯಾ ಮಹಾಸಭೆ ಮತ್ತು ಚುನಾವಣೆಯಲ್ಲಿ ಭಾಗವಹಿಸಲು/ಮತದಾನ ಮಾಡಲು ಯಾವುದೇ ರೀತಿಯಲ್ಲಿ ಅನರ್ಹತೆಗೊಳಗಾದ ಸದಸ್ಯರು. |
| 7 | 20<br>4) | **ಸದಸ್ಯನ ಕರ್ತವ್ಯಗಳು :**<br>ಸಹಕಾರಿಯ ಯಾರೇ ಸದಸ್ಯನು ಸಾಮಾನ್ಯವಾಗಿ ಸಹಕಾರಿಯ ಪ್ರತಿಯೊಂದು ಸಾಮಾನ್ಯ ಸಭೆಗೆ ಹಾಜರಾಗತಕ್ಕದ್ದು. ಆದರೆ, ಹಿಂದಿನ 5 ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಟ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಬೇಕು. |
| 8 | 22 | **ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು :**<br>ಸಹಕಾರಿಯು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು –<br>2. ಸದಸ್ಯನು ಹೊಂದಿರತಕ್ಕ ಯಾವುದೇ ಠೇವಣಿಯಲ್ಲಿ ವಾರ್ಷಿಕ ಕನಿಷ್ಠ ಒಂದು ನೂರು ರೂಪಾಯಿಗಳನ್ನು ತೊಡಗಿಸಿರಬೇಕು ಅಥವಾ<br>ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ, ವಾರ್ಷಿಕ ಕನಿಷ್ಟ ರೂ.500/–ಬಡ್ಡಿಯನ್ನು, ಮೂರು ತಿಂಗಳಿಗಿಂತ ಹೆಚ್ಚು ಬಾಕಿ ಉಳಿಯದ ಸಾಲದ ಖಾತೆಗಳಿಂದ ಪಾವತಿಸಿರಬೇಕು.<br>3. ಅಡಿಕೆ ದಲ್ಲಾಳಿ ಮಂಡಿಯೂ ಸೇರಿದಂತೆ ಸಹಕಾರಿಯ ಕಾರ್ಯ ವ್ಯಾಪ್ತಿಯಲ್ಲಿ ಇರುವ ಯಾವುದೇ ಶಾಖೆಯಲ್ಲಿ ಮೇಲೆ ಹೇಳಿದ ರೀತಿಯಲ್ಲಿ ಕನಿಷ್ಟ ವ್ಯವಹಾರ ನಡೆಸಿರಬೇಕು.<br>ಟಿಪ್ಪಣಿ : ಸಹಕಾರಿಯು ಅಂತಹ ಖಾತೆಗಳಲ್ಲಿ ಹಾಕುವ ಜಮಾ–ಖರ್ಚು ವ್ಯವಹಾರಗಳನ್ನು ಹೊರತುಪಡಿಸಿ. |
| 9 | 23<br>1 (8) | **ಸದಸ್ಯತ್ವದ ಅಂತ್ಯವಾಗುವಿಕೆ :**<br>ಕೈ ಬಿಡತಕ್ಕದ್ದು |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,
ವಿನೋಬನಗರ ಶಿವಮೊಗ್ಗ-577 204.

ಅಧ್ಯಕ್ಷರು
ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ (ನಿ.)
ವಿನೋಬನಗರ, ಶಿವಮೊಗ್ಗ-577 204

| | | |
|---|---|---|
| | 33<br>1) | ನಾಮಮಾತ್ರ ಸದಸ್ಯ :<br>ನಾಮಮಾತ್ರ ಸದಸ್ಯರ ಅರ್ಹತೆ, ಹಕ್ಕು ಮತ್ತು ಹೊಣೆಗಾರಿಕೆ :<br>18 ವರ್ಷ ವಯಸ್ಸು ಮೀರಿದ, ಸಹಕಾರಿಯ ಕಾರ್ಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಯಾವುದೇ ವ್ಯಕ್ತಿ<br>ಮತ್ತು ಕಾಯ್ದೆ ಕಲಂ 21 ಎ (1) (ಬಿ) ಮತ್ತು (ಸಿ) ನಲ್ಲಿ ಹೇಳಿರುವ ಯಾವುದೇ ಸಂಸ್ಥೆಯನ್ನು<br>ನಾಮಮಾತ್ರ ಸದಸ್ಯರನ್ನಾಗಿ ಸೇರಿಸಿ ಕೊಳ್ಳಬಹುದು. |
| 10 | 40 | ಸಾಮಾನ್ಯ ಸಭೆ / ಚುನಾವಣೆಗಳಲ್ಲಿ ಮತ ನೀಡಿಕೆ :<br>5. ಈ ಕೆಳಕಂಡ ಸದಸ್ಯರಿಗೆ ಸಹಕಾರಿಯ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಭಾಗವಹಿಸಲು ನೋಟಿಸು ಪಡೆಯುವ ಹಾಗೂ ಮತ ಚಲಾಯಿಸುವ ಹಕ್ಕಿರುವುದಿಲ್ಲ;<br>1) ಸಹಕಾರಿಯ ಮಹಾಸಭೆಯ ದಿನಾಂಕದಂದು ಅಥವಾ ಸಂದರ್ಭಾನುಸಾರ ಚುನಾವಣಾ ದಿನಾಂಕದಂದು ಸದಸ್ಯನಾಗಿ ಒಂದು ವರ್ಷ ಪೂರ್ಣಗೊಳ್ಳದಿದ್ದರೆ,<br>2) ಸಹಕಾರಿಯ ಯಾವುದೇ ಬಾಕಿಗಳಿಗಾಗಿ ಸುಸ್ತಿದಾರನಾಗಿದ್ದರೆ:<br>3) ಅ) ಹಿಂದಿನ ಐದು ವಾರ್ಷಿಕ ಮಹಾಸಭೆಗಳ ಪೈಕಿ ಯಾವುದೇ ಎರಡು ವಾರ್ಷಿಕ ಮಹಾಸಭೆಗಳಲ್ಲಿ ಹಾಜರಾಗುವ ಮೂಲಕ<br>ಆ) ಹಿಂದಿನ 5 ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವ ಅಂತಹ ಕನಿಷ್ಟ ಸೇವೆ ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳುವ ಮೂಲಕ<br>– ವ್ಯವಸ್ಥಾಪನೆಯಲ್ಲಿ ಭಾಗವಹಿಸದಿದ್ದರೆ,<br>ಅಂತಹ ಸದಸ್ಯರು ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಳಿಯ ಚುನಾವಣೆಯಲ್ಲಿ ಮತದಾನ ಮಾಡಲು ಒಂದು ವರ್ಷದವರೆಗೆ ಅನರ್ಹಗೊಳ್ಳತಕ್ಕದ್ದು.<br>4) ಯಾವುದೇ ಸಹ ಸದಸ್ಯ ಮತ್ತು ನಾಮ ಮಾತ್ರ ಸದಸ್ಯ |
| 11 | 40 (7) | ಅರ್ಹ ಸದಸ್ಯರ / ಮತದಾರರ ಪಟ್ಟಿ ಸಿದ್ಧ ಪಡಿಸುವ ವಿಧಾನ.<br>ಪ್ರತಿ ಸಾಮಾನ್ಯ ಸಭೆಯ ಮುನ್ನ ಹಿಂದಿನ ಆರ್ಥಿಕ ವರ್ಷದ ಅಂತ್ಯಕ್ಕೆ ಈ ಕೆಳಕಂಡಂತೆ ಅರ್ಹಸದಸ್ಯರ / ಮತದಾರರ ಪಟ್ಟಿ ಸಿದ್ದಪಡಿಸತಕ್ಕದ್ದು.<br>1. ಕನಿಷ್ಟ 50 ಮತ್ತು ಹೆಚ್ಚಿನ ಸಂಖ್ಯೆಯ ಷೇರು ಹೊಂದಿರುವವರ ಪಟ್ಟಿ ಮಾಡುವುದು<br>2. ನಂತರ ಅಂತಹ ಪಟ್ಟಿಯಲ್ಲಿ ಹಿಂದಿನ 5 ಸಹಕಾರ ವರ್ಷಗಳ ಪೈಕಿ 2 ಸಹಕಾರ ವರ್ಷಗಳಿಗೆ ಕನಿಷ್ಟ ವ್ಯವಹಾರ ಮಾಡದಿರುವವರ ಹೆಸರುಗಳನ್ನು ತೆಗೆಯುವುದು.<br>3. ನಂತರ ಹಿಂದಿನ 5 ವಾರ್ಷಿಕ ಮಹಾಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗದಿರುವವರ ಹೆಸರನ್ನು ತೆಗೆದು ಹಾಕುವುದು.<br>4. ನಂತರ ಸುಸ್ತಿದಾರರ ಹೆಸರನ್ನು ತೆಗೆದುಹಾಕುವುದು.<br>5. ಮಹಾಸಭೆ/ಚುನಾವಣೆ ತಾರೀಖು ನಿಗದಿಯಾದ ನಂತರ, ಮೇಲ್ಕಂಡಂತೆ ತಯಾರಿಸಿದ ಪಟ್ಟಿಯಲ್ಲಿರುವ ಆದರೆ ಅಂತಹ ದಿನಾಂಕಕ್ಕೆ ಒಂದು ವರ್ಷ ಪೂರೈಸಿರದ ಸದಸ್ಯನ ಹೆಸರನ್ನು ತೆಗೆದುಹಾಕತಕ್ಕದ್ದು. |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ..
ವಿನೋಬನಗರ ಶಿವಮೊಗ್ಗ-577 204.

ಅಧ್ಯಕ್ಷರು
ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ (ನಿ)
ವಿನೋಬನಗರ, ಶಿವಮೊಗ್ಗ-577 204

| | | |
|---|---|---|
| 12 | 88 | **ಸಂಯುಕ್ತ ಸಹಕಾರಿಗೆ ಪ್ರತಿನಿಧಿಗಳನ್ನು ಚುನಾಯಿಸುವ ವಿಧಾನ**<br>ಸಂಯುಕ್ತ ಸಹಕಾರಿಯಲ್ಲಿ ಸಹಕಾರಿಯನ್ನು ಪ್ರತಿನಿಧಿಸಲು ಸಹಕಾರಿಯ ಮಂಡಳಿಯ ನಿರ್ಣಯದ ಮೂಲಕ ಮಂಡಳಿಯ ಚುನಾಯಿತ ನಿರ್ದೇಶಕರಲ್ಲಿ ಒಬ್ಬರನ್ನು ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಅಂತಹ ಪ್ರತಿನಿಧಿಯ ಅಧಿಕಾರಾವಧಿಯು ಆತನು ಸಹಕಾರಿಯ ನಿರ್ದೇಶಕನಾಗಿರುವುದು ನಿಂತು ಹೋದಲ್ಲಿ ಮುಕ್ತಾಯಗೊಳ್ಳುತ್ತದೆ. |

**ದಿನಾಂಕ:10–10–2022**

**ಸ್ಥಳ:ಶಿವಮೊಗ್ಗ**

ಮುಖ್ಯಕಾರ್ಯನಿರ್ವಾಹಕರು — ಆಡಳಿತ ಮಂಡಳಿ ಸದಸ್ಯರು — ಆಡಳಿತ ಮಂಡಳಿ ಸದಸ್ಯರು — ಅಧ್ಯಕ್ಷರು

ಮುಖ್ಯ ಕಾರ್ಯನಿರ್ವಹಣಾಧಿಕಾರಿ — ನಿರ್ದೇಶಕರು — ನಿರ್ದೇಶಕರು — ಅಧ್ಯಕ್ಷರು

ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ... ಶಿವಮೊಗ್ಗ-577 204.

ವಿಶ್ವ ವಿವಿಧೋದ್ದೇಶ ಸೌಹಾರ್ದ ಸಹಕಾರಿ (ನಿ) ವಿನೋಬನಗರ, ಶಿವಮೊಗ್ಗ-577 204

ಈ ಕಛೇರಿಯ ಆದೇಶ ಸಂ: RCS/RSK/ಸೌಹಾರ್ದ/ನೋಂದಣಿ/137/2022-23 ದಿನಾಂಕ: 22-05-2023 ರ ಪ್ರಕಾರ ಸೌಹಾರ್ದ ಉಪವಿಧಿ ಸಂ: 1, 4(6), 4(24), 4ಎ(5), 6(2) 8(2) 18(1), 18(6), 18(10) ಹೊರತು, 20(4), 22(1), (2) (3), 33(1), 40(5) (1) (2) (3) (4) 40(7) (1) (2) (3) (4) (5), 88 ಉಪವಿಧಿಗಳನ್ನು [ಅನುಬಂಧ-5 ರಂತೆ] ನೋಂದಾಯಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರು

**ಕರ್ನಾಟಕ ರಾಜ್ಯ, ಬೆಂಗಳೂರು**